

ಸಾನ್ನಿಧ್ಯ ಎಂಬ ಮಾತಾಡುವವನು. ಚಾಮರಸನು ತನ್ನ ಕಥಾನಾಯಕನನ್ನು ಅದೆಷ್ಟೇ ಲೀಲೆಗಳಲ್ಲಿ ತೊಡಗಿಸಿದ್ದರೂ ಅಧ್ಯಾತ್ಮದ ತುತ್ತತುದಿಯಲ್ಲಿ ನಿಲ್ಲಿಸಿದ್ದರೂ, ಅಲ್ಲಲ್ಲಿ ಈ ಬಗೆಯ ಲೋಕಸತ್ಯವನ್ನೂ ನಿರೂಪಿಸುತ್ತಾನೆ. ಅಷ್ಟೇ ಅಲ್ಲ ಪ್ರಭುಲಿಂಗಲೀಲೆಯಲ್ಲಿ ನೋಡಬೇಕಾದ ಮತ್ತೊಂದು ಮುಖ್ಯ ಪ್ರಕರಣವೆಂದರೆ ಬಸವದಂಡಾಧಿಪನು ಶೂನ್ಯ ಸಿಂಹಾಸನವನ್ನು ರಚಿಸಿ ಅದನ್ನೇರಿ ಕೂರುವವರಿಗಾಗಿ ಹನ್ನೆರಡು ವರ್ಷ ಕಾಯುತ್ತ ಕೂತಿದ್ದುದು. ಬಸವದಂಡಾಧಿಪನ ಶೂನ್ಯ ಸಿಂಹಾಸನದ ರಚನೆಯೆಂದರೆ, ಚಕ್ರವರ್ತಿಗಳೆಂಬವರು ಸೋತು ಸತ್ತಾಗ ಮುರಿದು ಬೀಳುವ ಸಿಂಹಾಸನವಲ್ಲ. ಇದು ಎಲ್ಲ ಶತಮಾನದ ನಂತರ, ದಾರ್ಶನಿಕರ ಅಷ್ಟು ಸುಲಭಕ್ಕೆ ದಕ್ಕದ, ದಕ್ಕಿದರೂ ಏರಲಾಗದ ಅಲೌಕಿಕವೆನಿಸುವ ಸಿಂಹಾಸನ. ಈ ಶೂನ್ಯ ಸಿಂಹಾಸನದ ರಚನಾ ಮಾದರಿಯ ವಾಕ್ಯಗಳು ಪ್ರಭುಲಿಂಗಲೀಲೆಯಲ್ಲಿ ಊಹಿಸಲಾಗದಂತೆ, ಆದರೆ ಅರಿಯುವ ಅಂತರಂಗಕ್ಕೆ ಗೋಚರವಾಗುವ ರೂಪದಲ್ಲಿದೆ. ಭೂಮಿಯ ಕಾಠಿಣ್ಯ, ಜಲದ ರಸ, ಅಗ್ನಿಯ ಬಿಸಿ, ವಾಯುವಿನ ಕಲೆ, ಆಕಾಶದ ಶಬ್ದ ಗುಣ ಇವನ್ನೆಲ್ಲ ಒಟ್ಟು ಮಾಡಿ ಶೂನ್ಯ ಸಿಂಹಾಸನವಾಯಿತೆನ್ನುವ ಪದ್ಯ ಹೀಗಿದೆ–

ನೆಲದ ನೆಲೆಯಲಿ ಕಠಿಣ ತರವನು
ಜಲದ ನೆಲೆಯಲಿ ರಸಮಯವನಾ
ಜ್ವಲನ ನೆಲೆಯಲಿ ಬಿಸಿಯ ಮರುತನ ನೆಲೆಗೆ ಮಾರುತನ ।
ಸಲೆ ನಭದ ನೆಲೆಗಂಬರವ ಮನ
ನಿಲುಕದನುಪಮದೆಡೆಗೆ ಶೂನ್ಯವ
ನಿಲಿಸಿ ಬಸವನು ಶೂನ್ಯಸಿಂಹಾಸನವ ನಿರ್ಮಿಸಿದ ॥

ಲೋಕಾತೀತ ಪರಿಭಾಷೆಯ, ಮುರಿದುಬೀಳುವ ಸಿಂಹಾಸನಕ್ಕೆ ಸಂಬಂಧವಿಲ್ಲದ ಶೂನ್ಯದೆತ್ತರ ಸ್ಥಳವನ್ನು ಬಸವಣ್ಣ ಅನುಭವ ಮಂಟಪದಲ್ಲಿ ಹೇಗೆ ನಿರ್ಮಿಸಿದ್ದನೋ ಅದರ ಅರಿವಿಲ್ಲದಂತಾದ ನಮಗೆ ಅನುಪಮ, ಅರಿವಿನ ಶಬ್ದಗಳಲ್ಲಿ ಪುನರ್ನಿರ್ಮಿಸಿರುವುದು, ಚಾಮರಸನಂಥ ವೀರ ವಿರಕ್ತ